**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ, ಗೋಕಾಕ**

**ಸಿ.ಸಿ. ನಂ 6516/2022**

| | |
|---|---|
| **ಪಿರ್ಯಾದುದಾರರುಃ** | ಶ್ರೀ ಸಿದ್ದಪ್ಪ ನಾಗಪ್ಪ ನಾಗನೂರ,<br>26 ವರ್ಷ, ಸಾಃ ಖಾಸಗಿ ಕೆಲಸ,<br>ಸಾಃ ದಂಡಪುರ ತಾಃ ಗೋಕಾಕ. |
| | **- ವಿರುದ್ಧ -** |
| **ಆರೋಪಿ** | ಮಂಜುನಾಥ ಅನ್ನಪ್ಪ ಬಸಗೌಡನ್ನವರ,<br>ವಯಸ್ಸುಃ 33 ವರ್ಷ, ವೃತಿಃಕಾಂಟ್ರಾಕ್ಟರ,<br>ವಾಸಾಃ ಬಸಗೌಡನ್ನವರ ತೋಟ, ಕರಗೊನ<br>ತಾಃ ಚಿಕ್ಕೊಡಿ, ಜಿ.ಬೆಳಗಾವಿ. |

**ಆಪಾದನೆ**

**ಶ್ರೀ ರಾಜೀವ ಗೋಳಸಾರ, ಬಿ.ಎ., ಎಲ್.ಎಲ್.ಎಂ., ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂಡಾಧಿಕಾರಿ, ಗೋಕಾಕ,** ಆದ ನಾನು, ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡಂತೆ ಆಪಾದನೆ ಮಾಡುತ್ತಿದ್ದೇನೆಃ

ಪಿರ್ಯಾದಿದಾರರು ಮತ್ತು ಆರೋಪಿಯಾದ ನೀವು ಸುಮಾರು 03 ವರ್ಷಗಳಿಂದ ಒಳ್ಳೆಯ ಪರಿಚಯಸ್ಥರಾಗಿರುತ್ತೀರಿ, ಹೀಗಿರುವಾಗ ಆರೋಪಿತನು ಜುಲೈ 2021 ರಂದು ಗುತ್ತಿಗೆ ಕೆಲಸ ಮಾಡುವುದಕ್ಕಾಗಿ ಮತ್ತು ಒತ್ತೆ ಇಟ್ಟ ಆಭರಣಗಳನ್ನು ಬಿಡಿಸಿಕೊಳ್ಳುವ ಸಲುವಾಗಿ ಪಿರ್ಯಾದುದಾರರ ಕಡೆಯಿಂದ ರೂ.1,00,000/- ಸಾಲ ಕೇಳಿದ್ದು, ಅದಕ್ಕೆ ಪಿರ್ಯಾದುದಾರರು ರೂ.1,00,000/- ಗಳನ್ನು ಆರೋಪಿಯಾದ ನಿಮಗೆ ನೀಡಿರುತ್ತಾರೆ. ಹೀಗಿರುವಾಗ ಆರೋಪಿಯಾದ ನೀವು ಸದರಿ ಸಾಲದ ಹಣವನ್ನು 07 ತಿಂಗಳ ಒಳಗಾಗಿ (ಫೇಬ್ರವರಿ 2022)ರಂದು ಮರಳಿ ಕೊಡುತ್ತೇನೆಂದು ತಿಳಿಸಿರುತ್ತಿರಿ.

07 ತಿಂಗಳು (ಫೇಬ್ರವರಿ 2022) ಮುಗಿದಾದ ನಂತರ ಪಿರ್ಯಾದುದಾರರು ಆರೋಪಿಯಾದ ನಿಮಗೆ ಸದರಿ ಸಾಲದ ಹಣವನ್ನು ಮರು ಪಾವತಿ ಮಾಡುವಂತೆ ಕೇಳಿದಾಗ, ಆರೋಪಿಯಾದ ನೀವು ಮರಳಿ 04 ತಿಂಗಳ ಕಾಲವಕಾಶವನ್ನು ಕೇಳಿರುತ್ತೀರಿ, ಅದರಂತೆ 04 ತಿಂಗಳು ಮುಗಿದಾದ ನಂತರ ಪಿರ್ಯಾದುದಾರರು ಆರೋಪಿಯಾದ ನಿಮಗೆ ಸಾಲದ ಹಣವನ್ನು ಮರುಸಂದಾಯ ಮಾಡುವಂತೆ ವಿನಂತಿಸಿಕೊಂಡಾಗ ಕೊನೆಗೆ ನೀವು ದಿಃ10-06-2022 ರಂದು ನಿಮ್ಮ ಖಾತೆಯಾದ ಹೆಚ್ ಡಿ ಎಪ್ ಸಿ ಬ್ಯಾಂಕ ಬೆಂಗಳೂರು ಶಾಖೆ ಇಲ್ಲಿಗೆ ಸೇರಿದ ಚೆಕ್ ನಂ.000011 ನೇದ್ದನ್ನು ರೂ.1,00,000/- ಎಂದು ನಮೂದು ಮಾಡಿ ಪಿರ್ಯಾದುದಾರರಿಗೆ ನೀಡಿರುತ್ತಿರಿ.

ಆರೋಪಿಯಾದ ನೀವು ನೀಡಿದ ಚೆಕ್ಕುಗಳನ್ನು ಫಿರ್ಯಾದುದಾರರು ತಮ್ಮ ಖಾತೆಯಿರುವ ಐ ಸಿ ಐ ಸಿ ಐ ಬ್ಯಾಂಕ್ ಗೋಕಾಕ ಶಾಖೆ ಇಲ್ಲಿ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ ಆರೋಪಿಯಾದ ನಿಮ್ಮ ಖಾತೆಯಲ್ಲಿ (Payment Stopped by Drawer) ಎಂಬ ಹಿಂಬರಹ ಹಾಗೂ ಮೆಮೋದೊಂದಿಗೆ ದಿನಾಂಕ 14-06-2022 ರಂದು ಸದರಿ ಚೆಕ್ ಅಮಾನ್ಯಗೊಂಡಿರುತ್ತದೆ.

ನಂತರ ಫಿರ್ಯಾದುದಾರರು ಆರೋಪಿಯಾದ ನೀವು ನೀಡಿದ ಚೆಕ್ಕು ಅಮಾನ್ಯಗೊಂಡ ಬಗ್ಗೆ ತಮ್ಮ ವಕೀಲರ ಮುಖಾಂತರ ದಿನಾಂಕ 24-06-2022 ರಂದು ತಿಳುವಳಿಕೆ ಪತ್ರವನ್ನು ಆರೋಪಿಯಾದ ನಿಮಗೆ ನೋಂದಾಯಿತ ಅಂಚೆ ಮೂಲಕ ಕಳುಹಿಸಿದ್ದು, ಸದರಿ ನೋಟಿಸು ದಿನಾಂಕ 27-06-2022 ರಂದು ಜಾರಿಯಾಗಿದ್ದರೂ ಸಹ ಆರೋಪಿಯಾದ ನೀವು ನಿಗದಿತ ಸಮಯದಲ್ಲಿ ಚೆಕ್ಕಿನ ಹಣವನ್ನು ಮರುಸಂದಾಯ ಮಾಡದೆ ಇರುವ ಕಾರಣ ನೀವು ವರ್ಗಾವಣೀಯ ಲಿಖಿತಗಳ ಅಧಿನಿಯಮದ ಕಲಂ.138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆಪಾದಿಸಲಾಗಿರುತ್ತದೆ.

## ಆರೋಪಿಯ ಹೇಳಿಕೆ

ಪ್ರಶ್ನೆ ನಂ.1. ಈಗ ಓದಿ ಹೇಳಿದ ಆಪಾದನೆಯನ್ನು ಕೇಳಿಸಿಕೊಂಡಿರಾ ? ತಿಳಿಯಿತೇ ?

ಉತ್ತರಃ

ಪ್ರಶ್ನೆ ನಂ.2. ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ? ಅಥವಾ ವಿಚಾರಣೆಯಾಗಬೇಕಾ ?

ಉತ್ತರಃ

ಮೇಲಿನ ಆಪಾದನೆಯನ್ನು ಆರೋಪಿಗೆ ಕನ್ನಡ ಭಾಷೆಯಲ್ಲಿ ಓದಿ ಹೇಳಿ, ಆರೋಪಿಯು ಕೊಟ್ಟ ಉತ್ತರವು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆ ಎಂದು ಈ ದಿನ ಅಂದರೆ ದಿನಾಂಕ **21-06-2024** ರಂದು ತೆರೆದ ನ್ಯಾಯಾಲಯದಲ್ಲಿ ದೃಢೀಕರಿಸುತ್ತೇನೆ.

**(ರಾಜೀವ ಗೋಳಸಾರ)**
**ಪ್ರಧಾನ ಪ್ರ.ದ.ನ್ಯಾ. ದಂ, ಗೋಕಾಕ.**